ಮೇಲೆ ಅವಳ ಅಸಮಾಧಾನ ಸಂಕಟವಾಗಿ ಕೆರಳುತ್ತಿತ್ತು. ನೋಟ ಹೊಡೆಯೋದು ಕಲಿತು ಬಂದ ಗಂಡ, 'ಮಕ್ಕಳಾಗತಾವಂತ ಬೈರಾಗಿನೆ ಹೇಳಿದ್ರು... ನಂಗಂತು ಸಂಶಾ ಇಲ್ಲ' ಖಡಾಖಂಡಿತ ಅನ್ನುವ ಭರವಸೆ ಕೊಟ್ಟಿದ್ದ. ಈಗೀಗ ತನ್ನ ನಿರಾಸೆ ಮಕ್ಕಳಾಗಲಿಲ್ಲ ಅನ್ನೋದಕ್ಕೆ ಸೀಮಿತವಾದ್ದೇ ಅಥವಾ ಮತ್ತೂ ಯಾವದರಲ್ಲಿದೆಯೋ ಅನ್ನುವುದರಲ್ಲಿ ಅವಳಿಗೇ ಖಾತ್ರಿಯಿರಲಿಲ್ಲ.

ಗದ್ದೆಯಲ್ಲಿ ಜನ ಸೇರಿದ್ದರು. ಸಣ್ಣಪ್ಪ ಬದುವಿನ ಮೇಲೆ ಅತ್ತಿಂದಿತ್ತ ತಿರುಗಾಡುತ್ತ ತರಾತುರಿಯಲ್ಲಿದ್ದ. 'ಬರ್‍ರಿ ಬರ್‍ರಿ ಹೊತ್ತಾತು...' ಅಂತ ಇವರತ್ತ ನೋಡುತ್ತ ಹೇಳಿದವ ಎಲ್ಲರಿಗೂ ಎಲೆ ಅಡಕೆ ಚೂರು ಕೊಟ್ಟು ಸುರುಮಾಡಲು ಹೇಳಿದ. ಸಾಲಿನಲ್ಲಿ ಭತ್ತದ ಬುಡವನ್ನು ಕತ್ತರಿಸಿ ನೆಲಕ್ಕೆ ಸಿವುಡಾಗಿಡುವ ಕೆಲಸ ತೊಡಗಿತು. ಎರಡು ತಾಸಾದ ಮೇಲೆ ನೀರು ಕುಡಿಯಲು ನಿತ್ತರು. ಸಣ್ಣಪ್ಪ ಸುಗಣಿ ಹತ್ತಿರ ಬಂದು ತಂಬಾಕಿನ ಚೂರು ಕೊಡುತ್ತ, 'ಕೆಲಸದ ಚುರುಕು ಅಂದ್ರೆ ನಿಂದು ಸುಗಣಿ...' ಹೊಗಳಿದ. ತಂಬಾಕು ಕೊಡುವಾಗ ಅವನ ಬೆರಳು ತಾಗಿದ್ದನ್ನು ಯಾರಾದರೂ ಗಮನಿಸಿದರೋ ಎಂದು ಆತಂಕವಾಯಿತು ಅವಳಿಗೆ. ಮೊದಲಾದರೆ ಹಾಗೆ ಸಲಿಗೆ ವಹಿಸಿದವರನ್ನು ಸುಮ್ಮನೆ ಬಿಡುತ್ತಿರಲಿಲ್ಲ. ಯಾಕೋ ಏನೂ ಹೇಳಬೇಕೆನಿಸಲಿಲ್ಲ.

> **ಗೋಸಾಯಿ ಅವಳಿಗೆ ಮಗುವಾಗತದೆ ಅಂದಿದ್ನಾ ಅಥವ ನಿಂಗೆ ಮಗುವಾಗ್ತದೆ ಅಂತ ತನಗೆ ಹೇಳಿದ್ನಾ ಅನ್ನುವ ಸಂದೇಹ ಕಾಡಿತು. ಹಾಳಾಗಿಹೋಗಲಿ... ಒಂದು ಮಗುವಾದರೆ ಅದು ತನ್ನದಲ್ಲ ಅನ್ನುವ ಅಭಿಪ್ರಾಯ ಯಾಕೆ? ತಾನು ಹೆಬಗ ಅಂತ ತಾನೇ ನಿರ್ಧರಿಸಿಬಿಟ್ಟರೆ ಇನ್ನೇನುಳಿಯಿತು ಅಂತ ಹೇಸಿಗೆಪಟ್ಟುಕೊಂಡು ಗೆರಟೆಗೆ ಸರಾಯಿ ಎರಸಲು ಎದ್ದ.**

ದೊಡ್ಡೇರ್ಯನ ಗದ್ದೆಯಲ್ಲಿ ಹಸಿ ಕಮ್ಮಿಯಿರೋದಕ್ಕೆ ಕೊಯ್ಲಾಗಿ ಎಂಟುದಿನವೇ ಆಗಿತ್ತು. ಯಾವುದೋ ನೆಪ ಮಾಡಿಕೊಂಡು ಗದ್ದೆಯ ಕಡೆ ಹೊರಟಿದ್ದ. ಕೆರೆಯ ಹತ್ತಿರ ಬಂದವನಿಗೆ ಸಣ್ಣಪ್ಪನ ಗದ್ದೆಯಲ್ಲಿ ಕೊಯ್ಲು ಕಾಣಿಸಿತು. ಸಣ್ಣಪ್ಪ ತನ್ನ ಹೆಂಡತಿಯ ಜತೆ ಏನೋ ಹೇಳುವುದು, ಅದಕ್ಕವಳು ನಗುತ್ತ ಉತ್ತರಿಸಿದ್ದು ಕಂಡಿತು. ಅನವಶ್ಯಕವಾಗಿ ತನ್ನ ಗದ್ದೆಯಲ್ಲಿ ಓಡಾಡಿಕೊಂಡು ತಿರುಗಿ ಕ್ಯಾದ್ಗೆ ಹಿಂಡಿನ ಹತ್ತಿರ ನಿತ್ತವನಿಗೆ ಸಣ್ಣಪ್ಪ ತನ್ನ ಹೆಂಡತಿಯ ಕಡೆ ಜಾಸ್ತಿ ಲಕ್ಷ್ಯ ಕೊಡುತ್ತಿದ್ದಾನೆ ಅನಿಸಿತು. ಎರಡು ಮೂರು ಬಾರಿ ಯಾರು ಎಲೆ ಅಡಕೆ ಕೊಡುತ್ತಾರೆ; ಕೊಟ್ಟರೆ ಇವಳಿಗರ್ಥವಾಗಬೇಡವೆ? ಬ್ಯಾಡ ಅಂತ ಮುಖದ ಮೇಲೆ ಹೊಡೆದ ಹಾಗೆ ಹೇಳಬೇಕಲ್ಲವೆ? ಅಂತ ತನಗೆ ತಾನೆ ಕೇಳಿಕೊಳ್ಳುತ್ತ ಅಸಮಾಧಾನಗೊಂಡ. ರಾತ್ರಿ ಸುಗಣಿ ಅನ್ನ ಮಾಡುವುದರೊಳಗೆ ಒಂದು ಗೆರಟೆ ಸರಾಯಿಗೆ ಮೊಟ್ಟೆ ಸೇರಿಸಿ ಕುಡಿದಾಗಿತ್ತು. ಉಂಡು ಮಲಗಿದವ ಪಕ್ಕದಲ್ಲಿದ್ದವಳ ಬೆನ್ನು ಸವರಿದ್ದಕ್ಕೆ ಅವಳು, 'ದಿನೆಲ್ಲ ಗದ್ಯಾಗ ಬಗ್ಗಿ ಕೆಲ್ಸಾ ಮಾಡಿ ಮೈಕೈ ಎಲ್ಲ ನೋವು ನಂಗ. ನಿಮ್ದೊಂದು!... ಸುಮ್ನ ಮಕ್ಕಾರಿ' ಅಂತ ಅಲವತ್ತುಕೊಂಡಳು. 'ಆತು ಬುಡು...' ಅಂತ ಎದ್ದವ ಗೆರಟೆಗೆ ಸರಾಯಿ ಬಗ್ಗಿಸಿಕೊಂಡು ಬಾಗಿಲ ಹೊರಗೆ ಗಾಳಿಗೆ ಕುಳಿತವನನ್ನು ಕತ್ತಲೆ ಗವ್ವೆಂದು ಆವರಿಸಿತು.

ಮರುದಿನ ನಸುಕಿಗೆ ಸುಗಣಿ ಉಳಿದವರ ಜೊತೆ ಕೊಯ್ಲಿಗೆ ಹೊರಟುಹೋಗಿದ್ದಳು. ಪಂಚಾಯತ